	Secretariat	
13.	Cultural programme	4,77,750.00
14.	Hotel accommodation	55,69,745.00
15.	Catering	3,81,04,995.00
16.	Transportation	11,23,300.00
17.	License fees	2,92,095.00
	Total	29,20,36,324.00

-: Subject to scrutiny and finalization by Price Finalization Committee. Taxes extra as applicable.

ಕಾರಂಜಾ ನೀರಾವರಿ ಯೋಜನೆಗೆ ಕೇಂದ್ರ ಸರ್ಕಾರದ ನೆರವನ್ನು ಬೆಳಸಿಕೊಂಡಿರುವುದು.

14(46) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ: ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯ ಕಾರಂಜಾ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರದ ನೆರವಿನಿಂದ ಕಾರ್ಯಗತವಾಗುವ Acelerated Irrigation Benefit Programme (AIBP) ಯೋಜನೆಯಡಿಯಲ್ಲಿ ಕೇಂದ್ರದಿಂದ ಎಷ್ಟು ಹಣ ಯಾವ ಯಾವ ಕಾರ್ಯಗಳಿಗಾಗಿ ಬಿಡುಗಡೆಯಾಗಿದೆ;

ಆ) ಬಿಡುಗಡೆಯಾದ ಹಣವನ್ನು ಪೂರ್ಣವಾಗಿ ರಾಜ್ಯ ಸರ್ಕಾರವು ಬಳಕೆ ಮಾಡಿಕೊಂಡಿದೆಯೇ;

ಇ) ಹಾಗಿದ್ದಲ್ಲಿ, ಇಲ್ಲಿಯವರೆವಿಗೆ ಅಂದರೆ ದಿನಾಂಕ 30.05.2010 ರವರೆವಿಗೆ ಎಷ್ಟು ಹಣವನ್ನು ಯಾವ ಯಾವ ಕಾರಣಗಳಿಗೆ/ ಕಾಮಗಾರಿಗಳಿಗಾಗಿ ಬಳಸಿಕೊಳ್ಳಲಾಗಿದೆ; (ಪೂರ್ಣ ವಿವರಗಳನ್ನು ಒದಗಿಸುವುದು)

ಈ) ಕೇಂದ್ರ ಸರ್ಕಾರದ ಹಣವನ್ನು ರಾಜ್ಯ ಸರ್ಕಾರವು ಪೂರ್ಣವಾಗಿ ಬಳಸದೇ ಇದ್ದಲ್ಲಿ ಇದಕ್ಕೆ ಕಾರಣಗಳೇನು;

ಉ) ಹಣ ಬಳಸದೇ ಇರುವುದಕ್ಕೆ ಕಾರಣರಾದವರ ಮೇಲೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು?

ಶ್ರೀ ಬಸವರಾಜ ಬೊಮ್ಮಾಯಿ(ಜಲಸಂಪನ್ಮೂಲ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಎ.ಐ.ಬಿ.ಪಿ. ಯೋಜನೆಯಡಿ ಹಣ ಬಿಡುಗಡೆಯಾದ ಕಾರ್ಯಗಳ ವಿವರಗಳನ್ನು ಈ ಕೆಳಗೆ ನೀಡಿದೆ.

1) 2007-08ನೇ ಸಾಲಿನಲ್ಲಿ ಅನುದಾನ ಬಿಡುಗಡೆಯಾಗಿರುವುದಿಲ್ಲ.

2) 2008-09ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನವನ್ನು ಕೆಳಗಿನ ಕಾಮಗಾರಿಗಳಿಗೆ ಹಂಚಿಕೆ ಮಾಡಲಾಗಿದೆ.

ಎ) ಜಲಾಶಯ ಕಾಮಗಾರಿಗಳು	ರೂ. 145.00 ಲಕ್ಷ
ಬಿ) ಅಣೆಕಟ್ಟು ಮತ್ತು ಸಂಬಂಧಪಟ್ಟ ಕಾಮಗಾರಿಗಳು.	ರೂ. 227.00 ಲಕ್ಷ
ಸಿ) ಕಾಲುವೆಗಳು ಮತ್ತು ಶಾಖೆಗಳು.	ರೂ. 270.00 ಲಕ್ಷ
ಡಿ) ಸಣ್ಣ ಕಾಲುವೆಗಳು	ರೂ. 583.00 ಲಕ್ಷ
ಒಟ್ಟು	ರೂ. 1225.00 ಲಕ್ಷ

3) 2009-10ನೇ ಸಾಲಿನಲ್ಲಿ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಆ) ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ರೂ.1225.00 ಲಕ್ಷಗಳನ್ನು ಪೂರ್ಣವಾಗಿ ಬಳಕೆ ಮಾಡಿಕೊಂಡಿರುವುದಿಲ್ಲ.

ಇ) 2008-09 ರಿಂದ 30/05/2010ರ ವರೆಗೆ ರೂ.104.48 ಲಕ್ಷಗಳನ್ನು ಈ ಕೆಳಕಂಡ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರ.ಸಂ	ವಿವರ	ಕಾಮಗಾರಿಗಾಗಿ	ಭೂಸ್ವಾಧೀನಕ್ಕಾಗಿ	ಒಟ್ಟು
1.	ಆಲಾಶಯಗಳು	10.00	6.75	16.75
2.	ಅಣೆಕಟ್ಟು ಮತ್ತು ಸಂಬಂಧಪಟ್ಟ ಕಾಮಗಾರಿಗಳು	41.50	2.74	44.24
3.	ಕಾಲುವೆಗಳು ಮತ್ತು ಶಾಖೆಗಳು	23.97	17.10	41.07

4.	ಸಣ್ಣ ಕಾಲುವೆಗಳು	–	2.42	2.42
ಒಟ್ಟು		75.47	29.01	104.48

ಉಳಿದ ಮೊತ್ತಕ್ಕೆ ರೂ. 763.41 ಲಕ್ಷಗಳ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.

ಈ) ಕಾರಂಜಾ ಯೋಜನೆಯ ರೂ.532.00 ಕೋಟಿ ಮೊತ್ತದ ಪರಿಷ್ಕೃತ ಅಂದಾಜನ್ನು ಕೇಂದ್ರ ಸರ್ಕಾರದ ಅನುಮೋದನೆಗಾಗಿ ದಿನಾಂಕ:31/10/2008 ರಂದು ಸಲ್ಲಿಸಿದ್ದು, ಕೇಂದ್ರ ಸರ್ಕಾರದ ಯೋಜನಾ ಆಯೋಗ ದಿನಾಂಕ:15/12/2009 ರ ಪತ್ರದಲ್ಲಿ ಅನುಮೋದನೆ ದೊರಕಿದೆ. ಆದುದರಿಂದ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣವನ್ನು ಪೂರ್ಣವಾಗಿ ಬಳಸಿಕೊಳ್ಳುವುದು ಸಾಧ್ಯವಾಗಿರುವುದಿಲ್ಲ.

ಉ) ಉಳಿದ ಹಣವನ್ನು ಬಳಕೆ ಮಾಡಲಾಗುತ್ತಿರುವುದರಿಂದ ಕ್ರಮ ಕೈಗೊಳ್ಳುವುದು ಉದ್ಭವಿಸುವುದಿಲ್ಲ.

ಕೆರೆಗಳ ಪುನಃಶ್ಚೇತನ

(31) **ಶ್ರೀ ಮಂಜು ಎ:**(ಅರಕಲಗೂಡು) ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಎರಡು ವರ್ಷಗಳಲ್ಲಿ ಕೃಷಿರಂಗವನ್ನು ಪುನಶ್ಚೇತನಗೊಳಿಸಲು ಒಣಭೂಮಿ ಬೇಸಾಯ, ಕೆರೆಗಳ ಹೂಳೆತ್ತುವಿಕೆ ಮತ್ತು ಅಂತರ್ಜಲ ಅಭಿವೃದ್ಧಿಗಾಗಿ ಯಾವ ಯಾವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ?.

ಆ) ರಾಜ್ಯದ ಎಷ್ಟು ಕೆರೆಗಳಲ್ಲಿ ಹೂಳೆತ್ತಲಾಗಿದೆ ? ಇದಕ್ಕೆ ತಗುಲಿದ ವೆಚ್ಚವೆಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಕೇಂದ್ರ ಸರ್ಕಾರದಿಂದ ಕೆರೆಗಳ ಹೂಳೆತ್ತುವಿಕೆಗೆ ಎಷ್ಟು ನೆರವನ್ನು ಪಡೆಯಲಾಗಿದೆ?

ಶ್ರೀ ಗೋವಿಂದ ಎಂ. ಕಾರಜೋಳ(ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು):